ಕೊಡಬೇಕು. ವಿಶೇಷವಾಗಿ ಈ ಸಕ್ಕರೆ ಕಾರ್ಖಾನೆಗಳಿಗೆ ರೀಲಿಸ್ ಆಗುವಂತಹ ಸಕ್ಕರೆಗೆ ಸಂಬಂಧಿಸಿದಂತೆ ನಮ್ಮ ರಾಜ್ಯಮಟ್ಟದಲ್ಲಿ ಒಬ್ಬ ವಿಶೇಷ ಅಧಿಕಾರಿಯನ್ನು ನೇಮಿಸಿ ನಮಗೆ ಸಕ್ಕರೆ ಬಿಡುಗಡೆಯಾಗುವಂತಹ ರೀತಿಯಲ್ಲಿ ಸರ್ಕಾರ ಪೂರಕ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಇನ್ನು ಕೃಷಿ ಬಗ್ಗೆ ಈಗಾಗಲೇ ಸಾಕಷ್ಟು ಮಾತನಾಡಲಾಗಿದೆ. ಕೃಷಿಗೆ ಕೈಗಾರಿಕೆಯ ಸ್ಥಾನವನ್ನು ನೀಡಬೇಕೆಂಬುದು ರೈತರ ಒಕ್ಕೊರಲಿನ ಆಶಯಾಗಿದೆ ಅದನ್ನು ನಾನು ಪುಷ್ಟಿಕರಿಸುತ್ತೇನೆ. ಇವತ್ತು ರೈತನ ಕೃಷಿ ಸಾಮಾನು ಪರಿಕರಗಳ ಬೆಲೆ ಹೆಚ್ಚಾದರು ಕೂಡ, ರೈತ ಬೆಳೆದ ಬೆಳೆಯ ಬೆಲೆ ಸ್ಥಗಿತವಾಗಿ ಅಲ್ಲಿ ಕುಳಿತಿರುವ ಕಾಲದಲ್ಲಿ ಸಾಲದ ಹೊರೆ ಹೆಚ್ಚಾಗಿ ರೈತ ಆತ್ಮಹತ್ಯೆಗೆ ಪ್ರಯತ್ನಿಸುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ರಾಜ್ಯ ಸರ್ಕಾರ ಕೃಷಿ ಬೆಲೆ ಆಯೋಗವನ್ನು ರಚನೆ ಮಾಡಿ ಅದು ಕಾರ್ಯೋನ್ಮುಕವಾಗಿದೆ. ಆದರೆ ರೈತನಿಗೆ ತಾನು ಬೆಳೆದ ಬೆಳೆಯ ಬೆಲೆ ನಿಗದಿ ಮಾಡುವ ಸ್ವಾತ್ರಂತ್ಯ ಇನ್ನು ಬಂದಿಲ್ಲ. ರೈತನ ಅನಿಸಿಕೆಗೆ ತಕ್ಕಂತೆ ಬೆಲೆಯನ್ನು ನಿಗದಿ ಮಾಡುವ ವ್ಯವಸ್ಥೆಯನ್ನು ಮಾಡಬೇಕು. ಈ ಎಪಿಎಂಸಿಗಳಲ್ಲಿ ಈ ಎಲೆಕ್ಟ್ರಾನಿಕ್ಸ್ ತೂಕದ ಯಂತ್ರಗಳನ್ನು ಆಳವಡಿಸಬೇಕೆನ್ನುವ ಪ್ರಯತ್ನ ಇನ್ನೂ ಸಫಲವಾಗಿಲ್ಲ. ನಾವು ವೈಜ್ಞಾನಿಕ ಯುಗದಲ್ಲಿರುವ ಕಾರಣ ಈ ಎಲೆಕ್ಟ್ರಾನಿಕ್ ತೂಕದ ಯಂತ್ರಗಳನ್ನೂ ಕೂಡ ವ್ಯಾಪಕವಾಗಿ ಬಳಸುವಂತಾಗಬೇಕೆಂದು ಹೇಳುತ್ತಾ ಮಾನ್ಯ ಅಧ್ಯಕ್ಷರು ಇದುವರೆಗೆ ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕೆ ಧನ್ಯವಾದಗಳನ್ನು ವ್ಯಕ್ತಪಡಿಸಿ ಈ ಬೇಡಿಕೆಗಳಿಗೆ ನನ್ನ ಸಹಮತವನ್ನು ವ್ಯಕ್ತಪಿಡಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು :— ಈಗ ಒಂದು ಪ್ರಕಟಣೆ ಇದೆ.

4. **ಪ್ರಕಟಣೆ**

ವಿಷಯ: W.T.O. ಕುರಿತಂತೆ ನಡೆಯಲಿರುವ ಚರ್ಚೆಯಲ್ಲಿ ಸದಸ್ಯರುಗಳು ಭಾಗವಹಿಸಲು ಮನವಿ

"ವಿಶ್ವ ವ್ಯಾಪಾರ ಸಂಘಟನೆ (ಡಬ್ಲ್ಯೂಟಿಓಗೆ) ಕುರಿತಂತೆ ದಿನಾಂಕ: 26.7.2001 ರಂದು ಸಂಜೆ 5.00 ಗಂಟೆಗೆ ವಿಧಾನಸೌಧದ ಮೂರನೇ ಮಹಡಿಯಲ್ಲಿರುವ ಸಮ್ಮೇಳನ ಸಭಾಂಗಣದಲ್ಲಿ ಚರ್ಚೆ ನಡೆಯಲಿದ್ದು, ಸದರಿ ಚರ್ಚೆಯಲ್ಲಿ ಭಾರತ ಸರ್ಕಾರದ ಕೃಷಿ ಕಾರ್ಯಪಡೆಯ ಅಧ್ಯಕ್ಷರಾದ ಶ್ರೀ ಶರದ್ ಜೋಶಿಯವರು ಭಾಗವಹಿಸಲಿದ್ದು ಕರ್ನಾಟಕ ರಾಜ್ಯದ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಎಸ್.ಎಂ. ಕೃಷ್ಣರವರು ಉಪಸ್ಥಿತರಿದ್ದು ಹಾಗೂ ಕರ್ನಾಟಕ ಸರ್ಕಾರದ ಎಲ್ಲಾ ಸಚಿವರು ಇದರಲ್ಲಿ, ಭಾಗವಹಿಸಲಿದ್ದಾರೆ. ಆದುದರಿಂದ, ತಾವೂ ಕೂಡ ವಿಶ್ವ ವ್ಯಾಪಾರ ಸಂಘಟನೆ ಕುರಿತ ಚರ್ಚೆಯ ಸಮಾವೇಶದಲ್ಲಿ ಪಾಲ್ಗೊಳ್ಳುವಂತೆ ಕೋರಲಾಗಿದೆ."